ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಶಾಖೆ / ವಿಷಯ : DEPARTMENT / SUBJECT: ಸಂಸತ್ತು - ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 19/9/2020

## ಕೃಷಿಕರಿಗಿದು ರಕ್ಷಾ ಕವಚ, ಹಾದಿ ತಪ್ಪಿಸಬೇಡಿ: ಮೋದಿ

## ಪಂಜಾಬ್, ಹರಿಯಾಣದಲ್ಲಿ ರೈತಾಕ್ರೋಶ ತೀವ್ರ

# ಕೇಂದ್ರಕ್ಕೆ ಕೃಷಿ ಬಿಸಿ

**ಹೊಸದಿಲ್ಲಿ:** ಮೂರು ಮಹತ್ವದ ಕೃಷಿ ಸುಗ್ರೀವಾಜ್ಞೆ ವಿಧೇಯಕಗಳ ವಿಚಾರದಲ್ಲಿ ಮಿತ್ರಪಕ್ಷಗಳನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಸಂಸತ್ತಿನ ಅಂಗೀಕಾರ ಪಡೆಯುವ ವಿಶ್ವಾಸದಲ್ಲಿರುವ ಕೇಂದ್ರ ಸರಕಾರಕ್ಕೀಗ ಬಿಸಿ ತಾಗಿದೆ. ಬಿಜೆಪಿ ಹಾಗೂ ಪ್ರತಿಪಕ್ಷಗಳ ನಾಯಕರ ನಡುವೆ ಜಟಾಪಟಿ ಶುರುವಾಗಿದೆ. ಕೃಷಿ ವಿಧೇಯಕಗಳನ್ನು ವಿರೋಧಿಸಿ ಪಂಜಾಬ್ ಹಾಗೂ ಹರಿಯಾಣದಲ್ಲಿ ರೈತರ ಪ್ರತಿಭಟನೆ ಕಾವಿಗೆ ಬೆದರಿದ ಶಿರೋಮಣಿ ಅಕಾಲಿ ದಳದ ಏಕೈಕ ಸಚಿವೆ ಹರ್‌ಸಿಮ್ರತ್ ಕೌರ್ ರಾಜೀನಾಮೆ ನೀಡುವ ಮೂಲಕ ಸಂಪುಟದಿಂದ ಹೊರಬಂದ ಬೆನ್ನಲ್ಲೇ, ಇತ್ತ ಕಾಂಗ್ರೆಸ್ ದೇಶಾದ್ಯಂತ ಹೋರಾಟ ನಡೆಸಲು ಸಜ್ಜಾಗಿದೆ.

**ಪ್ರತಿಪಕ್ಷಗಳ ವದಂತಿಗೆ ಕಿವಿಗೊಡಬೇಡಿ »07**

ಲೋಕಸಭೆಯಲ್ಲಿ ಗುರುವಾರ 'ಕೃಷಿ ಉತ್ಪನ್ನ ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಮತ್ತು ಸೌಲಭ್ಯ) ಸುಗ್ರೀವಾಜ್ಞೆ 2020', 'ರೈತರ (ಸಬಲೀಕರಣ ಮತ್ತು ಸಂರಕ್ಷಣೆ) ಬೆಲೆ ಖಾತರಿ ಒಪ್ಪಂದ ಸುಗ್ರೀವಾಜ್ಞೆ 2020' ವಿಧೇಯಕಗಳಿಗೆ ಅಂಗೀಕಾರ ಸಿಕ್ಕಿದೆ. ಇನ್ನೊಂದು ಮಹತ್ವದ ವಿಧೇಯಕ 'ಕೃಷಿ ಸೇವಾ ಸುಗ್ರೀವಾಜ್ಞೆ 2020'ಕ್ಕೆ ಮಂಗಳವಾರವೇ ಸದನದ ಅನುಮೋದನೆ ಸಿಕ್ಕಿತ್ತು.



ಕೃಷಿ ವಿಧೇಯಕಗಳ ವಿರೋಧಿಸಿ ಪಂಜಾಬ್‌ನ ಹಲವು ಕಡೆ ರೈತರಿಂದ ಪ್ರತಿಭಟನೆ ನಡೆಯಿತು.

**ರಾಜ್ಯಸಭೆಯಲ್ಲಿ ಇಂದು ಮಂಡನೆ**

ಮೂರೂ ಕೃಷಿ ವಿಧೇಯಕಗಳು ರಾಜ್ಯಸಭೆಯಲ್ಲಿ ಶನಿವಾರ ಮಂಡನೆಯಾಗಲಿವೆ. ಕೇಂದ್ರ ಸರಕಾರ ಮೇಲ್ಮನೆಯಲ್ಲಿಯೂ ಸುಲಭವಾಗಿ ಅಂಗೀಕಾರ ಸಿಗಲಿದೆ ಎಂಬ ವಿಶ್ವಾಸದಲ್ಲಿದೆ. 245 ಸದಸ್ಯ ಬಲದ ರಾಜ್ಯಸಭೆಯಲ್ಲಿ ಬಿಜೆಪಿ 86 ಸದಸ್ಯರನ್ನು ಹೊಂದಿದೆ. ಎನ್‌ಡಿಎ ಮಿತ್ರಪಕ್ಷಗಳು, ಮೈತ್ರಿಕೂಟದಲ್ಲಿ ಇಲ್ಲದಿದ್ದರೂ ಬಿಜೆಪಿಗೆ ಬೆಂಬಲ ನೀಡಿರುವ ಎಐಎಡಿಎಂಕೆ (9), ಟಿಆರ್‌ಎಸ್ (7), ವೈಎಸ್ಸಾರ್ ಕಾಂಗ್ರೆಸ್ (6) ಬಲ ಗಣನೆಗೆ ತೆಗೆದುಕೊಂಡರೆ ಬಿಲ್‌ಗಳನ್ನು ಬೆಂಬಲಿಸುವ ಸದಸ್ಯರ ಸಂಖ್ಯೆ 130 ದಾಟುತ್ತದೆ ಎನ್ನುವುದು ಸರಕಾರದ ಲೆಕ್ಕಾಚಾರವಾಗಿದೆ.

**... ಕಾಯ್ದೆ ... ಬಿಸಿ**

**ಸರಕಾರ ಹೇಳುವುದೇನು?**

- ರೈತರು ತಮ್ಮ ಉತ್ಪನ್ನಗಳನ್ನು ದೇಶದ ಯಾವ ಭಾಗದಲ್ಲಾದರೂ ಮಾರಲು ಅವಕಾಶ.
- ಕೃಷಿ ವಲಯದಲ್ಲಿ ಹೂಡಿಕೆ ಹೆಚ್ಚಿ ಉದ್ಯೋಗ ಅವಕಾಶ ಸೃಷ್ಟಿ, ರೈತರ ಆದಾಯ ದುಪ್ಪಟ್ಟು

**ಪ್ರತಿಪಕ್ಷಗಳ ಆಕ್ಷೇಪವೇನು?**

- ರಾಜ್ಯದ ಅಧಿಕಾರ ಮೊಟಕಾಗಲಿದ್ದು, ಎಪಿಎಂಸಿ ಅವನತಿಗೆ ಕಾರಣವಾಗುತ್ತದೆ.
- ಬಂಡವಾಳ ಶಾಹಿಗಳ ಕೈಗೆ ಕೃಷಿ ವಲಯ ಜಾರಿ, ರೈತರಿಗೆ ಅನ್ಯಾಯವಾಗುತ್ತದೆ.

ಈ ಮೂರು ಕೃಷಿ ವಿಧೇಯಕಗಳು ಐತಿಹಾಸಿಕವಾಗಿದ್ದು, ರೈತರಿಗೆ ನಿಜವಾದ ಸ್ವಾತಂತ್ರ್ಯ ನೀಡುತ್ತವೆ. ವಾಸ್ತವದಲ್ಲಿ ಅವು ರೈತರ ರಕ್ಷಾ ಕವಚಗಳಾಗಿ ಕೆಲಸ ಮಾಡಲಿವೆ. ಆದರೆ ಪ್ರತಿಪಕ್ಷಗಳು ಸರಕಾರ ಕನಿಷ್ಠ ಬೆಂಬಲ ಬೆಲೆ ಯೋಜನೆ ರದ್ದುಪಡಿಸುತ್ತದೆ, ಆಹಾರ ಧಾನ್ಯ ಖರೀದಿಸುವುದಿಲ್ಲ ಎಂದು ತಪ್ಪು ಮಾಹಿತಿ ನೀಡುವ ಮೂಲಕ ರೈತರ ದಿಕ್ಕು ತಪ್ಪಿಸುತ್ತಿವೆ.



-ನರೇಂದ್ರ ಮೋದಿ
ಪ್ರಧಾನಿ